

# ಕೋಲ್ಮಿಂಚಿನ ಆಸರೆ

ಭೂಮಿಯ ಮೇಲೆ ಬೆಳಕು ಇರುವುದು ಗೊತ್ತು, ಆದರೆ ಕೋಲ್ಮಿಂಚು ಬಾನಿನ ಸೊತ್ತು. ಆಕಾಶದಂತೆ ಹರಡಿಕೊಂಡಿರುವ ಗಾಂಧೀಜಿ, ನಾವು ಕತ್ತೆತ್ತಿ ನೋಡಿದಾಗೆಲ್ಲ ಕೋಲ್ಮಿಂಚನ್ನು ಹೊಳೆಯಿಸಿ ದಾರಿ ತೋರುತ್ತಾರೆ. ಗಾಂಧೀ ಜಯಂತಿಯ ನೆಪದಲ್ಲಿ ಅವರತ್ತ ನೋಡಿದಾಗ, ಒಬ್ಬ ಲೇಖಕ ಮತ್ತು ಪತ್ರಕರ್ತ ಕಂಡರು. ರಾಜಕೀಯ ಮತ್ತು ಸಾರ್ವಜನಿಕ ರಂಗಗಳ ಜೊತೆ ಇನ್ನಿತರ ರಂಗಗಳಲ್ಲೂ ಅವರು ಅತ್ಯಂತ ಕ್ರಿಯಾಶೀಲರಾಗಿದ್ದರು. ಗಾಂಧೀಜಿ ಅವುಗಳೆಲ್ಲವನ್ನೂ ತಮ್ಮ ರಾಜಕೀಯ ಮತ್ತು ಸಾರ್ವಜನಿಕ ಚಿಂತನೆಗಳ ಬಲವರ್ಧನೆಗೆ ಬಳಸಿಕೊಂಡ ಬಗೆಯೇ ಅಸಾಧಾರಣ. ಬಲಗೈಯಲ್ಲಿ ಬರೆದು ಸುಸ್ತಾದಾಗ ಎಡಗೈಯಲ್ಲೂ ಬರೆಯುತ್ತಿದ್ದ ಅವರ ನಿರಂತರ ಅಕ್ಷರ ಪ್ರೀತಿಗೆ ಜನಪ್ರೀತಿಯೇ ಮೂಲ. 'ಜನರು ಧೈರ್ಯದಿಂದ ಇರುವಂತೆ ಬೋಧಿಸುವುದೇ ಒಬ್ಬ ಪತ್ರಕರ್ತನ ಕರ್ತವ್ಯ; ಅವರಲ್ಲಿ ಭಯ ತುಂಬುವುದಲ್ಲ' ಎಂಬ ಅವರ ಕಿಡಿನುಡಿ ಎಂದಿಗೂ ನಮ್ಮ ಪಾಲಿನ ಮಾರ್ಗದರ್ಶಿ ಕೋಲ್ಮಿಂಚು.

ಹಬ್ಬವೆಂದರೆ ಗಾರಿಗೆ ಹೋಳಿಗೆಯಲ್ಲ. ದೈನಂದಿನ ಬದುಕು ಏಕೋ ಏಕತಾನಕ್ಕೆ ಬಿತ್ತೆನಿಸಿದಾಗ ಮನಕ್ಕೆ ಮುದ ನೀಡುವ, ಆಲೋಚನೆಗೆ ಹದ ನೀಡುವ ಸಂಗತಿಗಳನ್ನು ಹಬ್ಬದ ಹೆಸರಿನಲ್ಲಿ ಕಣ್ಮುಂದೆ ತಂದುಕೊಳ್ಳುವುದೇ ನಿಜವಾದ ಸಡಗರ, ಸಂಭ್ರಮ. ಹಾಗೆ ಸೆಪ್ಟೆಂಬರ್ ಸಂಚಿಕೆಯಲ್ಲಿ 'ಗಜಮುಖನ ಬಹುಮುಖ'ವನ್ನು ಸಾಂಸ್ಕೃತಿಕವಾಗಿ ಸ್ಮರಿಸಿದ ರೀತಿ, ಓದುಗರಿಗೆ ಬಹಳ ಸಂತೋಷ ಕೊಟ್ಟಿದೆ. ಅದರಲ್ಲೂ ಕಲಾಪ್ರಪಂಚಕ್ಕೆ 'ರಾಮ್‌ಸನ್ಸ್ ಕಲಾ ಪ್ರತಿಷ್ಠಾನ'ದ ಹೆಮ್ಮೆಯ ಕೊಡುಗೆಯಾದ, ಜಿ.ಎಲ್.ಎನ್. ಸಿಂಹ ಅವರು ರಚಿಸಿದ 'ಗಣೇಶ ಪುರಾಣ' ಆಧಾರದ ಕಲಾಕೃತಿಗಳಿಗೆ ಅಪಾರ ಪ್ರಶಂಸೆ ವ್ಯಕ್ತವಾಗುತ್ತಿದೆ. ಅನೇಕರು ತಮ್ಮ ಸಂಗ್ರಹಕ್ಕೆ ಅವುಗಳ ಪ್ರತಿಗಳು ಬೇಕೆಂದು ಕೇಳುತ್ತಿದ್ದಾರೆ. 'ಮಯೂರ'ಕ್ಕಂತೂ ಇವುಗಳನ್ನು ಮೊದಲ ಬಾರಿಗೆ ಪ್ರಸ್ತುತಪಡಿಸಿದ ಸಾರ್ಥಕ ಭಾವವಿದೆ.

ಈ ಸಂಚಿಕೆಯಲ್ಲಿ, ನಮ್ಮ ನಾಡಹಬ್ಬ ದಸರೆಯ ಸಂದರ್ಭದಲ್ಲಿ ಮೈಸೂರು ಅರಮನೆಯ ಸಾಂಸ್ಕೃತಿಕ ವೈಭವವನ್ನು, ದೀಪಾವಳಿ ಹಬ್ಬಕ್ಕೆ ಕನ್ನಡದ ಪ್ರತಿಭಾವಂತ ಹಿರಿಯ ಕವಿ ಅಂದು ಮುಂದಿಟ್ಟಿದ್ದ ಆಶಯಗಳನ್ನು ಮತ್ತೆ ಮೆಲುಕು ಹಾಕಿರುವುದು ಕೂಡ ಆ ದಿಸೆಯಲ್ಲಿನ ಪ್ರಾಂಜಲ ಪ್ರಯತ್ನಗಳೇ ಆಗಿವೆ.

ಕತ್ತಲೆಯೆಂಬುದು ಬರಿ ಕತ್ತಲೆಯಲ್ಲ– ಅಜ್ಞಾನ, ಹಸಿವು, ಅಶಾಂತಿ, ಭಯೋತ್ಪಾದನೆ, ಭ್ರಷ್ಟಾಚಾರ ಎಲ್ಲದಕ್ಕೂ ಮತ್ತೊಂದು ಹೆಸರು. ಅಂತರಂಗ ಬಹಿರಂಗಗಳನ್ನು ಬೆಳಗುವ ದೀಪಗಳ ಅನ್ವೇಷಣೆಗೆ ಇಂಥ ಎಲ್ಲ ಕತ್ತಲೆಯನ್ನು ಹೊರದೂಡುವ ಹಂಬಲವಿರಲಿ; ಕಾಲದ ಹಕ್ಕಿ ಹಾರುತ್ತ ಹಾರುತ್ತ ಕತ್ತಲೆ, ಕೆಡುಕುಗಳನ್ನು ಕುಕ್ಕಲಿ.

◆ ಆರ್. ಪೂರ್ಣಿಮಾ